**DW-1:** ಗೌರಮ್ಮ

ದಿನಾಂಕಃ **15.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ**

1. ನನ್ನ ವಿವಾಹದ ಲಗ್ನಪತ್ರಿಕೆ ಇರುವುದಿಲ್ಲ ಆ ಕಾಲದಲ್ಲಿ ಲಗ್ನಪತ್ರಿಕೆ ಮುದ್ರಿಸಿಲ್ಲ. ಆ ಸಂದರ್ಭದಲ್ಲಿ ಪೋಟೋ ಸಹ ತೆಗೆಯುತ್ತಿರಲಿಲ್ಲ. ನಮ್ಮ ವಿವಾಹವನ್ನು ವೆಂಕಟೇಶಪ್ಪ ಎಂಬ ಪುರೋಹಿತರು ನೇರವೇರಿಸಿರುತ್ತಾರೆ. ನಾನು, ನನ್ನ ಭಾವನ ಮಗ ಮಲ್ಲಪ್ಪ ರವರು ವಿಭಾಗ ಮಾಡಿಕೊಂಡಿರುತ್ತೇವೆ. ವಿಭಾಗಪತ್ರದಂತೆ ನಮಗೆ ಹತ್ತುವರೆ ಎಕರೆ ಅವರಿಗೆ ಹತ್ತುವರೆ ಎಕರೆ ಮತ್ತೊಂದು ಸ್ವತ್ತಿನಲ್ಲಿ ನನಗೆ ಮೂರುವರೆ ಎಕರೆ ಅವರಿಗೆ ಮೂರುವರೆ ಎಕರೆ ಬಂದಿರುತ್ತದೆ. ವಿಭಾಗಪತ್ರದಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ವಿಭಾಗಪತ್ರ ಬರೆದ ಸಂದರ್ಭ 3 ನೇ ಪ್ರತಿವಾದಿ ಹನುಮಂತರಾಯಪ್ಪ ಬಂದಿಲ್ಲ ಎಂದರೆ ಸರಿಯಲ್ಲ. ನಾನು, ಗಂಗಮ್ಮ ಮತ್ತು ಹನುಮಂತರಾಯ ವಿಭಾಗಪತ್ರವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. 2 ಸರ್ವೇ ನಂಬರ್ ಗಳಲ್ಲಿ ವಾದಿಯರಿಗೆ ಭಾಗ ಇದೆ ಎಂದರೆ ಸರಿಯಲ್ಲ. ನನ್ನ ಗಂಡ ಇದ್ದ ಸಂದರ್ಭ ನನ್ನ ಗಂಡ ಮತ್ತು ಈರಣ್ಣ ರವರು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿಲ್ಲ. ಅವರು ಸತ್ತ ನಂತರ ಮಾಡಿಕೊಳ್ಳಲಾಗಿದೆ. ವಿಭಾಗಮಾಡಿಕೊಂಡ ಸ್ವತ್ತುಗಳು ಲಕ್ಷ್ಮಪ್ಪ ರವರಿಗೆ ಬರುವ ಸ್ವತ್ತುಗಳು ಎಂದರೆ ಸರಿ. ಅವರು ಸತ್ತ ನಂತರ ಹೆಂಡತಿಯರಿಗೆ ಬರುತ್ತವೆ. ಲಕ್ಷ್ಮಪ್ಪ ರವರ 2 ನೇ ಹೆಂಡತಿ ಮತ್ತು ಮಕ್ಕಳಿಗೆ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.